USN | | | | | | | | | | |

Question Paper Version : A

First/Second Semester B.E/B.Tech. Degree Examination, Dec.2023/Jan.2024

# ಸಾಂಸ್ಕೃತಿಕ ಕನ್ನಡ

## (COMMON TO ALL BRANCHES)

Time: 1 hrs.] [Max. Marks: 50

### ಸೂಚನೆಗಳು

1. ಎಲ್ಲ ೫೦ ಪ್ರಶ್ನೆಗಳಿಗೂ ಉತ್ತರಿಸಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ.
2. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ಯು.ಎಸ್.ಎನ್ ಸಂಖ್ಯೆ ಹಾಗೂ ಪಶ್ನೆ ಪತ್ರಿಕೆಯ ಶ್ರೇಣಿಯನ್ನು ಅಂದರೆ A, B, C ಅಥವಾ D ಯನ್ನು ತಪ್ಪಿಲ್ಲದಂತೆ ಕಡ್ಡಾಯವಾಗಿ ಗುರುತಿಸುವುದು ಅಭ್ಯರ್ಥಿಯ ಜವಾಬ್ದಾರಿಯಾಗಿರುತ್ತದೆ.
3. ಓ.ಎಂ.ಆರ್ ಉತ್ತರ ಪತ್ರಿಕೆಯಲ್ಲಿ ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿಮಾಡದೆ ಹಾಗೆಯೇ ಬಿಟ್ಟಲ್ಲಿ ಅಥವಾ ಭರ್ತಿಮಾಡಿದ ಮಾಹಿತಿಯಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ರದ್ದು ಪಡಿಸಲಾಗುವುದು.
4. ಕೇವಲ ಒಂದು ಉತ್ತರವನ್ನು ಮಾತ್ರ ಉತ್ತರ ಪತ್ರಿಕೆಯಲ್ಲಿ ಗುರುತಿಸತಕ್ಕದ್ದು. ಒಂದೆ ಪ್ರಶ್ನೆಗೆ ಎರಡು ಉತ್ತರವನ್ನು ಗುರುತಿಸುವುದು ಅಮಾನ್ಯ.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾದ ಓ.ಎಂ.ಆರ್ ಉತ್ತರ ಪತ್ರಿಕೆಯ ಹಾಳೆಯ ಮೇಲೆ ಕಪ್ಪು ಅಥವಾ ನೀಲಿ ಶಾಹಿಯ ಬಾಲ್‌ಪಾಯಿಂಟ್ ಪೆನ್ನಿನಿಂದ ಗುರುತು ಮಾಡಬೇಕು.

---

1. "ಪರಿಸರ, ಪರಂಪರೆ ಹಾಗೂ ಪ್ರತ್ಯಕ್ಷ ಜೀವನದ ಅನೇಕ ಸಂಸ್ಕಾರಗಳ ಮೂಲಕ ಮನುಷ್ಯನ ಅಂತರಂಗ ಪಡೆಯುವ ಪರಿಪಕ್ವತೆ" ಇದನ್ನು ಹಂಪ ನಾಗರಾಜಯ್ಯನವರು ಏನೆಂದು ಕರೆದಿದ್ದಾರೆ?

   a) ಸಂಸ್ಕೃತಿ b) ಆಚರಣೆ c) ಸಮನ್ವಯ d) ಸೌಂದರ್ಯ

2. ಕೆಳಗಿನವುಗಳಲ್ಲಿ ಅಂಡಯ್ಯ ಕವಿಯ ಕಾವ್ಯ ಯಾವುದು?

   a) ಕಾವ್ಯ ಮೀಮಾಂಸೆ b) ಕಬ್ಬಿಗರ ಕಾವ್ಯ
   c) ಕರ್ನಾಟಕ ಗತವೈಭವ d) ಶ್ರೀರಾಮಾಯಣ ದರ್ಶನಂ

3. ರಾಜರಾಜರಲ್ಲಿ ಯುದ್ಧಗಳು ಏಕೆ ನಡೆಯುತ್ತಿದ್ದವು?

   a) ರಾಜ್ಯ ರಕ್ಷಣೆ b) ಸಾಹಸ ಮನೋವೃತ್ತಿ c) a) ಮತ್ತು b) d) ಯಾವುದು ಅಲ್ಲ

4. ಕವಿರಾಜ ಮಾರ್ಗದಲ್ಲಿ ಹೇಳಿರುವಂತೆ ಕನ್ನಡಿಗರು ಎಂತಹವರು?

   a) ಕೀರ್ತಿವಂತರು b) ಗುಣಶಾಲಿಗಳು c) ಸ್ವಾಭಿಮಾನಿಗಳು d) ಎಲ್ಲವೂ ಸರಿ

5. "ನಿಘಂಟು ತಜ್ಞ" ಎಂದು ಹೆಸರಾದ ಕನ್ನಡದ ಲೇಖಕರು ಯಾರು?
   a) ಪ್ರೊ.ಜಿ. ವೆಂಕಟಸುಬ್ಬಯ್ಯ
   b) ಬಿ.ಎಂ.ಶ್ರೀ
   c) ಕುವೆಂಪು
   d) ಪು.ತಿ.ನ

6. "ಕರ್ನಾಟಕ ಗತವೈಭವ" ಕೃತಿಯನ್ನು ರಚಿಸಿದವರು ಯಾರು?
   a) ಶ್ರೀರಂಗ
   b) ಆಲೂರು ವೆಂಕಟರಾಯರು
   c) ಮಾಸ್ತಿ ವಂಕಟೇಶ ಅಯ್ಯಂಗಾರ್
   d) ಸಿದ್ದಯ್ಯ ಪುರಾಣಿಕ

7. ರಾಯಚೂರಿನಲ್ಲಿ 1955 ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಯಾರು?
   a) ಕೆ. ಎಸ್. ನರಸಿಂಹಸ್ವಾಮಿ
   b) ದ.ರಾ.ಬೇಂದ್ರೆ
   c) ಶ್ರೀರಂಗ
   d) ಡಿ.ವಿ.ಜಿ

8. ಕನ್ನಡ ಭಾಷೆಯನ್ನು ವಿವಿಧ ರೂಪಗಳಲ್ಲಿ ಸುಮಾರು ಎಷ್ಟು ಜನರು ಆಡುನುಡಿಯಾಗಿ ಬಳಸುತ್ತಿದ್ದಾರೆ?
   a) 30 ದಶಲಕ್ಷ
   b) 40 ದಶಲಕ್ಷ
   c) 80 ದಶಲಕ್ಷ
   d) 60 ದಶಲಕ್ಷ

9. ವಿನೋಬಾ ಭಾವೆಯವರು ಕನ್ನಡ ಭಾಷೆಯ ಲಿಪಿಯನ್ನು ಏನೆಂದು ಕರೆದಿದ್ದಾರೆ?
   a) ಲಿಪಿಗಳ ರಾಣಿ
   b) ಯುವರಾಣಿ
   c) ಯುವರಾಜ
   d) ಲಿಪಿಗಳ ರಾಜ

10. ಭಾಷಿಯ ಸಮ್ಮತವಾದ ನಿಯಮಗಳನ್ನು ತಿಳಿಸುವ ಶಾಸ್ತ್ರಕ್ಕೆ ಏನನ್ನುತ್ತಾರೆ?
   a) ವಿಮರ್ಷೆ
   b) ವ್ಯಾಕರಣ
   c) ನಿಘಂಟು
   d) ಕಾಗುಣಿತ

11. ಶರಣ ಚಳವಳಿಯ ಪ್ರೇರಕ ಶಕ್ತಿ ಯಾರು?
   a) ಬಸವಣ್ಣ
   b) ಬಿಜ್ಜಳ ಮಹಾರಾಜ
   c) ಅಲ್ಲಮಪ್ರಭು
   d) ಅಕ್ಕಮಹಾದೇವಿ

12. "ರಾಮನಾಥ" ಅಂಕಿತದೊಡನೆ ವಚನಗಳನ್ನು ರಚಿಸಿದ ವಚನಕಾರ ಯಾರು?
   a) ಆಯ್ದಕ್ಕಿ ಮಾರಯ್ಯ
   b) ಜೇಡರದಾಸಿಮಯ್ಯ
   c) ಅಲ್ಲಮಪ್ರಭು
   d) ಆಯ್ದಕ್ಕಿ ಲಕ್ಕಮ್ಮ

13. ಅಕ್ಕಮಹಾದೇವಿಯ ವಚನಗಳ ಅಂಕಿತ ಯಾವುದು?
   a) ಅಮರೇಶ್ವರ ಲಿಂಗ
   b) ಗುಹೇಶ್ವರ
   c) ಚೆನ್ನಮಲ್ಲಿಕಾರ್ಜುನ
   d) ಕೂಡಲಸಂಗಮದೇವ



VTU-22-02-2024 01:15:56pm - SN - SN - SN

24. ಕೆಳಗಿನವುಗಳಲ್ಲಿ ಯಾವುದು ಡಿ.ವಿ.ಜಿ ಯವರ ಕಾವ್ಯ ಅಲ್ಲ?

a) ನಿವೇದನೆ b) ಉಮರನ ಒಸಗೆ c) ಕೇತಕಿವನ d) ಕೊಳಲು

25. ದ.ರಾ.ಬೇಂದ್ರೆಯವರ ಕಾವ್ಯನಾಮ ಏನು?

a) ಅಂಬಿಕಾತನಯದತ್ತ b) ಆನಂದಕಂದ c) ಕುವೆಂಪು d) ಶ್ರೀನಿವಾಸ

26. "ಕುರುಡು ಕಾಂಚಾಣ" ಎಂಬ ಪದ್ಯವನ್ನು ಬೇಂದ್ರೆಯವರ ಯಾವ ಕವನ ಸಂಕರಲನದಿಂದ ಆಯ್ದುಕೊಳ್ಳಲಾಗಿದೆ?

a) ಅರಳುಮರಳು b) ನಾದಲೀಲೆ c) ಗರಿ d) ಸಖೀಗೀತ

27. ಅಂಗಡಿಯೊಳಗೆ ಕಾಂಚಾಣದ ಸದ್ದು ಹೇಗಿದೆ ಎಂದು ಕವಿ ಹೇಳುತ್ತಾರೆ?

a) ಗಣಣ b) ತನನ c) ಝಣ ಝಣ d) ತೋಂ ತೋಂ

28. ಕೆಳಗಿನ ಕೃತಿಗಳಲ್ಲಿ ಕುವೆಂಪು ಅವರ ಕಾದಂಬರಿಯನ್ನು ಗುರುತಿಸಿ.

a) ಚಿತ್ರಾಂಗದಾ b) ದುರ್ಗಾಸ್ತಮಾನ c) ಸಂಧ್ಯಾರಾಗ d) ಮಲೆಗಳಲ್ಲಿ ಮದುಮಗಳು

29. ಸರ್ವರಿಗೆ ಸಮಬಾಳು ! ಸರ್ವರಿಗೆ -------- ಎಂದು ಕವಿ ಕುವೆಂಪು ಹೇಳಿದ್ದಾರೆ?

a) ಸಮಪಾಲು ! b) ಸಹಬಾಳ್ವೆ ! c) ಸಮಾನ ಪಾಲು ! d) ಯಾವುದು ಅಲ್ಲ

30. "ವಿಪ್ಲವ" ಪದದ ಅರ್ಥವೇನು?

a) ಶಬ್ದಕೋಶ b) ಕ್ರಾಂತಿ c) ಚಿತ್ರ d) ವಿಶ್ವ

31. ಮಂಡ್ಯ ಜಿಲ್ಲೆಗೆ ನೀರನ್ನು ಒದಗಿಸುವ ಕೃಷ್ಣರಾಜಸಾಗರದ ಯೋಜನೆಯನ್ನು ತಯಾರಿಸಿದವರು ಯಾರು?

a) ಡಾ. ವಿಶ್ವೇಶ್ವರಯ್ಯ b) ಥಾಮಸ್ ಮನ್ರೊ c) ರಾ.ಹ.ದೇಶಪಾಂಡೆ d) ಯಾರು ಅಲ್ಲ.

32. ------ ಜಿಲ್ಲೆಯ ಸೌಂದರ್ಯದಲ್ಲಿ ವಿಶ್ವೇಶ್ವರಯ್ಯ ಜೀವಂತರಾಗಿದ್ದಾರೆ.

a) ದಕ್ಷಿಣ ಕನ್ನಡ b) ಮಂಡ್ಯ c) ರಾಮನಗರ d) ಚಿಕ್ಕಮಂಗಳೂರು

33. ಡಾ. ವಿಶ್ವೇಶ್ವರಯ್ಯನವರು ಪ್ರವಾಸ ಹೊರಟಾಗ ಅವರ ಸೂಟ್ ಕೇಸಿನಲ್ಲಿ ಯಾವ ಪುಸ್ತಕದ ಪ್ರತಿಯನ್ನು ಇಟ್ಟುಕೊಳ್ಳುತ್ತಿದ್ದರು.

a) ವೇದ b) ಉಪನಿಷತ್ತು c) ಭಗವದ್ಗೀತೆ d) ರಾಮಾಯಣ



VTU-22-02-2024 01:15:56pm - SN - SN - SN
22-02-2024 01:31:44pm - SN - SN - SN

14. ಗುರು, ಲಿಂಗ ಮತ್ತು ಜಂಗಮ ಈ ಮೂರಕ್ಕಿಂತ ಯಾವುದು ಅತ್ಯಂತ ಶ್ರೇಷ್ಠವೆಂದು ಆಯ್ದಕ್ಕಿ ಮಾರಯ್ಯ ತನ್ನ ವಚನದಲ್ಲಿ ಹೇಳಿದ್ದಾರೆ?
a) ವಿದ್ಯ b) ದಾನ c) ಬುದ್ಧಿ d) ಕಾಯಕ

15. "ಅದರಿಂದೇನು ಫಲ, ಇದರಿಂದೇನು ಫಲ" ಈ ಕೀರ್ತನೆಯನ್ನು ರಚಿಸಿದವರು ಯಾರು?
a) ಪುರಂದರ ದಾಸರು b) ವಿಜಯದಾಸರು c) ಕನಕದಾಸರು d) ಗೋಪಾಲದಾಸರು

16. ಕನಕದಾಸರ ಆರಾಧ್ಯದೈವ ಯಾರು?
a) ಚೆನ್ನಕೇಶವ b) ಆದಿಕೇಶವ c) ಸೋಮೇಶ್ವರ d) ಪುರಂದರ ವಿಠಲ

17. ಹಲವು ಕಾಲ ಕಲ್ಲು ನೀರೊಳಗಿದ್ದರೆ ನೆನೆದು ಅದು ------ ಆಗುವುದೆ?
a) ಶಿಲಾಮಂದಿರ b) ತಕ್ಷಶಿಲೆ c) ಅಮೃತಶಿಲೆ d) ಯಾವುದು ಅಲ್ಲ

18. ನವಿಲಿಗೆ ------ ಬರೆದವರು ಯಾರು ಎಂದು ಕನಕದಾಸರು ತಮ್ಮ ಕೀರ್ತನೆಯಲ್ಲಿ ಕೇಳುತ್ತಾರೆ?
a) ಕುಡಿ b) ಚಿತ್ತಾರ c) ಬಣ್ಣ d) ಚಿತ್ರ

19. ಶಿಶುನಾಳ ಶರೀಫರು ತಮ್ಮ ತತ್ವಪದದಲ್ಲಿ ಮಣ್ಣನ್ನು ಯಾವುದಕ್ಕೆ ಹೋಲಿಸಿದ್ದಾರೆ?
a) ಚಿನ್ನ b) ಬೆಳ್ಳಿ c) ವಜ್ರ d) ತಾಮ್ರ

20. ಎಂತಹ ಬೆಂಕಿಯನ್ನು ಹಚ್ಚಿ ಕುಂಬಾರಕಿ ಕೊಡಗಳ ಸುಡುತ್ತಾಳೆ ಎಂದು ಶರೀಫರು ಹೇಳುತ್ತಾರೆ?
a) ಆಚಾರ b) ಅರಿವು c) ಧ್ಯಾನ d) ಭಕ್ತಿ

21. ಹುಲ್ಲಾಗಿ ಬೆಟ್ಟದಡಿ, ಮನೆಗೆ ಏನಾಗು ಎಂದು ಕವಿ ಡಿ.ವಿ.ಜಿಯವರು ಹೇಳುತ್ತಾರೆ?
a) ಮಲ್ಲಿಗೆಯಾಗು b) ಕನಕಾಂಬರವಾಗು c) ಸೇವಂತಿಗೆಯಾಗು d) ಗುಲಾಬಿಯಾಗು

22. ನಗುವು ಸಹಜದ ಧರ್ಮ, ನಗಿಸುವುದು ಎಂತಹ ಧರ್ಮ ಎಂದು ಕವಿ ಹೇಳುತ್ತಾರೆ?
a) ಅಂತರಂಗದ ಧರ್ಮ b) ಪರಧರ್ಮ c) ಬಹಿರಂಗದ ಧರ್ಮ d) ಯಾವುದು ಅಲ್ಲ

23. ಋಷಿ ವಾಕ್ಯದೊಡನೆ ಯಾವ ಕಲೆ ಸೇರಿದರೆ ಜನಜೀವನ ಸುಖಕರವಾಗಿರುವುದೆಂದು ಕವಿ ಹೇಳುತ್ತಾರೆ?
a) ತಂತ್ರಜ್ಞಾನ b) ತಂತ್ರಾಂಶ c) ವಿಜ್ಞಾನ d) ಅಂತರ್ಜಾಲ



VTU-22-02-2024 01:15:56pm - SN - SN - SN

34. ಕೆಳಗಿನವುಗಳಲ್ಲಿ ಯಾವುದು ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಸಂಸ್ಥೆ.

a) ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಭದ್ರಾವತಿ   b) ಮೈಸೂರು ಬ್ಯಾಂಕ
c) ಮೈಸೂರು ವಿಶ್ವವಿದ್ಯಾಲಯ   d) ಎಲ್ಲವೂ ಸರಿ

35. "ಎಷ್ಟೊಂದು ಶಕ್ತಿ ಪೋಲಾಗುತ್ತಿದೆ" ಈ ಮಾತನ್ನು ವಿಶ್ವೇಶ್ವರಯ್ಯನವರು ಯಾವ ಜಲಪಾತವನ್ನು ನೋಡಿ ಹೇಳಿದ್ದರು?

a) ಜೋಗ   b) ಶಿವನಸಮುದ್ರ   c) ಹೆಬ್ಬೆ   d) ಅರಶಿನ ಮಕ್ಕಿ

36. ಬಟ್ಟೆಗಳಿಗೆ ಬಣ್ಣಕಟ್ಟುವ ಕಲೆಗೆ ಏನೆಂದು ಹೆಸರು?

a) ಚಮ್ಮಾರಿಕೆ   b) ಬಣ್ಣಗಾರಿಕೆ   c) ಹೈನುಗಾರಿಕೆ   d) ಮಾತುಗಾರಿಕೆ

37. ಭಾರತದಲ್ಲಿ ತಯಾರಾಗುತ್ತಿದ್ದ ಬಟ್ಟೆಗಳಿಗೆ ಕೆಳಗಿನ ಯಾವ ದೇಶದಲ್ಲಿ ಬೇಡಿಕೆ ಇತ್ತೆಂದು ಲೇಖಕರು ಹೇಳುತ್ತಾರೆ?

a) ಶ್ರೀಲಂಕಾ   b) ಪಾಕಿಸ್ತಾನ   c) ಗ್ರೀಸ್   d) ಯಾವುದು ಅಲ್ಲ

38. ಪರಿಸರದಲ್ಲಿ ಸಿಗುತ್ತಿದ್ದ ಕಚ್ಚಾ ವಸ್ತುಗಳ ಮುಖಾಂತರ ಕುಶಲಕರ್ಮಿಯ ------ ಪ್ರತಿಫಲಿತವಾಗುತ್ತಿತ್ತು ಎಂದು ಲೇಖಕರು ಹೇಳುತ್ತಾರೆ?

a) ಕೈಕೌಶಲ್ಯ   b) ನೈಪುಣ್ಯ   c) ಸೌಂದರ್ಯ ಪ್ರಜ್ಞೆ   d) ಎಲ್ಲವೂ ಸರಿ

39. ಸಾಂಪ್ರದಾಯಿಕ ಕರಕುಶಲ ಕಲೆಗಳ ಮೇಲೆ ಭಾರಿ ಪೆಟ್ಟು ಬಿದ್ದದ್ದು ಯಾವಾಗ?

a) ಕೈಗಾರಿಕಾ ಕ್ರಾಂತಿಯ ಪರಿಣಾಮ   b) ಯಂತ್ರಗಳ ಆವಿಷ್ಕಾರ
c) ಬೇಡಿಕೆ ಕಡಿಮೆಯಾದದ್ದು   d) ಯಾವುದೂ ಅಲ್ಲ

40. ಭಾರತದಲ್ಲಿ ಬೇರೆ ಬೇರೆ ಬಣ್ಣಗಳನ್ನು ನೀಡುವ ಸುಮಾರು ಎಷ್ಟು ಗಿಡಗಳಿವೆ ಎಂದು ಅಂದಾಜಿಸಲಾಗಿದೆ?

a) 100   b) 300   c) 200   d) 350

41. "ಯುಗಾದಿ" ಕಥೆಯನ್ನು ಬರೆದ ಕನ್ನಡದ ಲೇಖಕರು ಯಾರು?

a) ವಸುಧೇಂದ್ರ   b) ಪಿ.ಲಂಕೇಶ್   c) ವೈದೇಹಿ   d) ವಸುಂಧರಾ ಭೂಪತಿ

42 ಯುಗಾದಿ ಕಥೆಯಲ್ಲಿ ಚಿತ್ರಿತವಾಗಿರುವ ಹಿರಿಯಜೀವಿ ಗೋಪಣ್ಣನವರ ವೃತ್ತಿ ಏನು?

a) ವೈದ್ಯ   b) ಶಿಕ್ಷಕ   c) ಅಭಿಯಂತರ   d) ಗುಮಾಸ್ತ



VTU 22-02-2024 01:15:50pm - SN - SN - SN
22-02-2024 01:31:44pm - SN - SN - SN

43. ಗೋಪಣ್ಣನವರ ಮಗ ಪ್ರಹ್ಲಾದ ಯಾವ ಪದವಿ ಪಡೆದ?

a) ಬಿ.ಎಸ್ಸಿ  b) ವೈದ್ಯ  c) ಇಂಜಿನಿಯರಿಂಗ್  d) ಬಿ.ಕಾಂ

44. ಗೋಪಣ್ಣ ಮಾಸ್ತರರನ್ನು ಭೇಟಿಯಾಗಲು ಊರಿನಿಂದ ಬಂದ ಅವರ ಗೆಳೆಯ ಯಾರು?

a) ಇಸ್ಮಾಯಿಲ್  b) ನಚಿಕೇತ  c) ಸಾದಿಕ್  d) ಕಾಸಿಂಸಾಬರು

45. ಸರ್ಕಾರಿ ಆಸ್ಪತ್ರೆಯಲ್ಲಿ ಗೋಪಣ್ಣ ಮಾಸ್ತರರನ್ನು ಗುರುತಿಸಿದ ಅವರ ಶಿಷ್ಯ ಯಾರು?

a) ರಾಧಾ  b) ರುಕ್ಮಣಿ  c) ರೇಖಾ  d) ರೂಪಾ

46. ಡಾ.ಹಿ.ಚಿ.ಬೋರಲಿಂಗಯ್ಯ ಅವರ ಬುಡಕಟ್ಟು ಜೀವನವನ್ನು ಕುರಿತ ಕಾದಂಬರಿ ಯಾವುದು?

a) ಬುಡಕಟ್ಟು ದೈವಾರಾಧನೆ  b) ಆನೆಕಾಡು

c) ಕಾಡು ಕಾಂಕ್ರಿಟ್  d) ಉಜ್ಜನಿ ಚೌಡಮ್ಮ

47. ಕಾಸಿಂಸಾಬರ ಮಗಳು

a) ಚಿತ್ರ  b) ವಂದನಾ  c) ಚಾಂದನಿ  d) ತಸೀಮಾ

48. ಹಾಡುವಳ್ಳಿಯ ಹಿಂದಿನ ಹೆಸರೇನು?

a) ಸಂಸ್ಕೃತಿಪುರ  b) ಸಾಹಿತ್ಯಪುರ  c) ಸಂಗೀತನಗರ  d) ಸಂಗೀತಪುರ

49. ಸಹ್ಯಾದ್ರಿ ಶ್ರೇಣಿಯ "ಮೆಗಾನೆ" ಎಂಬ ಹಳ್ಳಿಯಲ್ಲಿರುವ ಜನಾಂಗ ಯಾವುದು?

a) ಕುಣಬಿ  b) ಗೊರವ  c) ದೀವ  d) ಗೊಂಡ

50. ಮಾರ್ಗದರ್ಶಕ ಕುಪ್ಪಯ್ಯ ಹೆಗಲಿಗೆ ಏನನ್ನು ಏರಿಸಿಕೊಂಡದ್ದ?

a) ಬಿಲ್ಲು  b) ನಾಡಕೋವಿ  c) ಶಲ್ಯ  d) ಲಾಟೀನು

* * * * *



VTU-22-02-2024 01:15:56pm - SN - SN - SN - SN
22-02-2024 01:31:44pm - SN - SN - SN - SN - SN